

# ಆಸಿನ್ ವಿವಾಹವಂತೆ!

ಬಾಲಿವುಡ್‌ಗೆ ಅಡಿಯಿಟ್ಟ ದಕ್ಷಿಣದ ನಟಿ ಆಸಿನ್, ದೊಡ್ಡ ನಟರ ಜತೆ ತೆರೆ ಹಂಚಿಕೊಳ್ಳುವ ಅದೃಷ್ಟ ಪಡೆದುಕೊಂಡರೂ ತನ್ನದೇ ಛಾಪು ಮೂಡಿಸುವಷ್ಟು ಹೆಸರು ಮಾಡಲಿಲ್ಲ. ಅದಕ್ಕೆ ಸ್ಟಾರ್ ನಟರ ನಾಮದ ಬಲವೂ ಕಾರಣ ಇರಬಹುದು. ಹೀಗಾಗಿ ಹಂತಹಂತವಾಗಿ ಆಸಿನ್ ಕ್ಯಾಮೆರಾ ಮುಂದಿನ ಕೆಲಸವನ್ನು ಕಡಿಮೆ ಮಾಡಿಕೊಳ್ಳುತ್ತಿದ್ದಾಳೆ. ಅರ್ಥಾತ್, ವೃತ್ತಿ ಬದುಕಿನಿಂದ ದೂರ ಸರಿದು ಕಲ್ಯಾಣಪರ್ವದತ್ತ ಮನಸ್ಸು ಹರಿಬಿಟ್ಟಿದ್ದಾಳೆ.

ವೃತ್ತಿಪರ ಬದ್ಧತೆಗಳನ್ನು ನಿಧಾನವಾಗಿ ಕಡಿಮೆ ಮಾಡಿಕೊಳ್ಳುತ್ತಿರುವ ಆಸಿನ್, ವೈಯಕ್ತಿಕ ಬದುಕಿನತ್ತ ಹೆಚ್ಚು ಗಮನ ಹರಿಸುತ್ತಿದ್ದಾಳೆ. ಎರಡು ವರ್ಷದ ಹಿಂದೆಯೇ ಹೊಸ ಸಿನಿಮಾಗಳನ್ನು ಒಪ್ಪಿಕೊಳ್ಳುವುದನ್ನು ಆಕೆ ನಿಲ್ಲಿಸಿಯಾಗಿದೆ. ಇದು ಆಕೆ ಹಸೆಮಣೆ ಏರಲು ನಡೆಸುತ್ತಿರುವ ಸಿದ್ಧತೆಯ ಸೂಚನೆ.

ಅಂದಹಾಗೆ, ಆಸಿನ್ ಕೈಹಿಡಿಯುತ್ತಿರುವುದು ಮೈಕ್ರೊಮ್ಯಾಕ್ಸ್ ಕಂಪೆನಿಯ ಸಂಸ್ಥಾಪಕ ರಾಹುಲ್ ಶರ್ಮಾರನ್ನು. 'ಕಿಲಾಡಿ 786' ಚಿತ್ರದ ವೇಳೆ ನಟ ಅಕ್ಷಯ್ ಕುಮಾರ್ ತಮ್ಮ ಗೆಳೆಯ ರಾಹುಲ್ ಶರ್ಮಾರನ್ನು ಆಸಿನ್‌ಗೆ ಪರಿಚಯ ಮಾಡಿಸಿಕೊಟ್ಟಿದ್ದರಂತೆ. ಅಲ್ಲಿಂದಲೇ ಆಸಿನ್ ಬದುಕಿನಲ್ಲಿ ಹೊಸ ಪ್ರೇಮ್ ಕಹಾನಿ ಆರಂಭವಾಗಿತ್ತು. ಈ ಜೋಡಿ ನಡುವೆ 'ಮ್ಯಾಚ್ ಮೇಕರ್' ಕೆಲಸ ಮಾಡಿದ್ದು ಅಕ್ಷಯ್ ಎಂಬ ಗಾಳಿ ಸುದ್ದಿಯೂ ಹರಡಿತ್ತು. ಅದಕ್ಕೆ 'ನಾನು ಇಬ್ಬರನ್ನೂ ಪರಸ್ಪರ ಪರಿಚಯ ಮಾಡಿಸಿಕೊಟ್ಟದ್ದಷ್ಟೇ, ಮ್ಯಾಚ್‌ಮೇಕಿಂಗ್ ಕಂಪೆನಿಯನ್ನೇನೂ ಪ್ರಾರಂಭಿಸಿಲ್ಲ' ಎಂದು ತುಸು ಖಾರವಾಗಿಯೇ ಉತ್ತರಿಸಿದ್ದರು ಅಕ್ಷಯ್. ಇವರಿಬ್ಬರ ನಡುವಿನ ಪ್ರೇಮಕಥೆಯ ಕುರಿತು ಆಪ್ತೇಷ್ಟರು ಮಾಹಿತಿ ನೀಡಿದ್ದರೂ ಇದುವರೆಗೆ ಆಸಿನ್ ಅದನ್ನು ಬಹಿರಂಗವಾಗಿ ಒಪ್ಪಿಕೊಂಡಿಲ್ಲ. ಆದರೆ ವೈಯಕ್ತಿಕ ಬದುಕಿನತ್ತ ಗಮನ ಹರಿಸುವುದು ಎಂದು ಹೇಳಿಕೊಂಡಿರುವ ಆಕೆ, ಪರೋಕ್ಷವಾಗಿ ಶೀಘ್ರವೇ ವಿವಾಹ ಬಂಧನಕ್ಕೊಳಪಡುವ ಸೂಚನೆ ನೀಡಿದ್ದಾಳೆ. ಮದುವೆ ಬಳಿಕವೂ ನಟನೆ ಮುಂದುವರಿಸುತ್ತಾಳೋ ಇಲ್ಲವೋ ಎಂಬುದರ ಬಗ್ಗೆ ಇನ್ನೂ ಖಚಿತವಾಗಿಲ್ಲ. ಸದ್ಯ ಅಭಿಷೇಕ್ ಬಚ್ಚನ್ ಜೊತೆ ನಟಿಸಿರುವ 'ಆಲ್ ಈಸ್ ವೆಲ್' ಈಗಷ್ಟೇ ತೆರೆಕಂಡಿದೆ. ಇದರ ಬಳಿಕವೂ ಆಕೆಯ ಬದುಕು 'ಆಲ್ ಈಸ್ ವೆಲ್' ಆಗಲಿ ಅಲ್ಲವೇ?

## ಈಗಲೇ ಏಕೆ ಮದುವೆ?



ಅತ್ತ ಆಸಿನ್, ಮದುವೆಗೆ ತುದಿಗಾಲಲ್ಲಿ ನಿಂತಿದ್ದರೆ, ಇತ್ತ ಅನಿಲ್ ಕಪೂರ್ ಮುದ್ದಿನ ಮಗಳು ಸೋನಂ ಕಪೂರ್ ಮದುವೆ ಒಲ್ಲೆ ಎನ್ನುತ್ತಿದ್ದಾಳೆ. 'ಸಾವರಿಯಾ'ದ ಈ ಬೆಡಗಿ ಇನ್ನೂ ಚಿಕ್ಕವಳಂತೆ ಕಂಡರೂ ವಯಸ್ಸು 30. ಅಪ್ಪ ಅನಿಲ್ ಕಪೂರ್ ಮಗಳ ಮದುವೆಯೋ ಅಥವಾ ಆಕೆ ವೃತ್ತಿಯಲ್ಲಿಯೇ ಸ್ವಲ್ಪ ಕಾಲ ಇರವುದೋ ಎಂಬ ಗೊಂದಲದಲ್ಲಿದ್ದರೆ, ಸೋನಂ ಮದುವೆ ಮದುವೆ ಮಾತೆತ್ತಿದರೆ ಸಿಡುಕುತ್ತಾಳೆ. ಸಾಮಾನ್ಯವಾಗಿ ನಟಿಯರು ಒಂದು ವಯಸ್ಸು ದಾಟಿದ ಕೂಡಲೇ ಅಥವಾ ಅವರ ವರ್ಚಸ್ಸು ಕಡಿಮೆಯಾಗುತ್ತಿದ್ದಂತೆಯೇ ಸಹಜವಾಗಿಯೇ ಮದುವೆ ಸಂಗತಿ ಹೊಗೆಯಾಡತೊಡಗುತ್ತದೆ. ಸೋನಂ ವಿಚಾರದಲ್ಲಿ ಈ ಎರಡೂ ಅಂಶಗಳಿವೆ. ಇತ್ತೀಚೆಗೆ ಫ್ಯಾಷನ್ ಕಾರ್ಯಕ್ರಮವೊಂದರಲ್ಲಿ ವಧುವಿನ ಉಡುಪು ಧರಿಸಿ ಎದುರಾದ ಮೇಲೆ ಮತ್ತೆ ಈ ಪ್ರಶ್ನೆ ಕಾಡದಿರುವುದೆ? ಸುದ್ದಿಮಿತ್ರರು ಕುತೂಹಲದಿಂದ ಆಕೆಯ ಮದುವೆ ಪ್ರಶ್ನೆ ಎದುರಿಗಿಟ್ಟರು.

'ಎಲ್ಲರೂ ನನ್ನ ಮದುವೆಯ ಕುರಿತೇ ಏಕೆ ಕೇಳುತ್ತಿದ್ದೀರಿ? ನಾನು ಒಂಟಿಯಾಗಿ ಇರುವುದರಿಂದ ಖುಷಿಯಾಗಿದ್ದೇನೆ' ಎಂದು ಮುನಿಸು ತೋರಿದಳು ಸೋನಂ.

ತನ್ನ ಕುಟುಂಬದಲ್ಲಿ ತಂದೆ ಅನಿಲ್ ಕಪೂರ್ ಸೇರಿದಂತೆ ಎಲ್ಲಾ ಪುರುಷರೂ, ಮದುವೆ ಜೀವನದ ಬಗ್ಗೆ ನಂಬಿಕೆಯನ್ನೇ ಹೊಂದಿಲ್ಲ. ಅದಕ್ಕೆ ಅವರು ವಿರುದ್ಧವಾಗಿದ್ದಾರೆ ಎಂದು ಹಿಂದೊಮ್ಮೆ ಹೇಳಿಕೊಂಡಿದ್ದಳು ಸೋನಂ. ಸೋನಂ ಸಹ ಮದುವೆಯ ಕುರಿತು ಒಲವು ತೋರಿಲ್ಲ. ಇತ್ತೀಚಿನ ಫ್ಯಾಷನ್ ಷೋನಲ್ಲಿ ಆಕೆ ವಧುವಿನ ಉಡುಪು ತೊಟ್ಟು ಕಂಗೊಳಿಸುತ್ತಿದ್ದಳು. ಸಾಂಪ್ರದಾಯಿಕ ವಧುವಿನ ಉಡುಗೆಯಲ್ಲಿ ಕಾಣಿಸಿಕೊಳ್ಳುವುದು ಆಕೆಯ ಕನಸಾಗಿತ್ತಂತೆ. ವಾರಾಣಸಿ ವಧುವಾಗಿ ಅಲಂಕೃತಗೊಂಡಿರುವುದು ರೋಮಾಂಚನ ಮೂಡಿಸುತ್ತಿದೆ ಎಂದು ಸೋನಂ ಹೇಳಿಕೊಂಡಿದ್ದಳು. ಮದುವೆ ಪುರಾತನ ಕಾಲದ ಫ್ಯಾಷನ್ ಎನ್ನುವ ಸೋನಂ, ಮದುಮಗಳಂತೆ ಹಳೆಯ ಸಾಂಪ್ರದಾಯಿಕ ಶೈಲಿಯಲ್ಲಿ ಅಲಂಕಾರಗೊಳ್ಳುವುದನ್ನು ಇಷ್ಟಪಡುತ್ತಾಳೆ. ವಿಪರ್ಯಾಸ ಎಂದರೆ ಇದೇ ಇರಬೇಕು!

■ ಅಮಿ